**ಶಿವಜ್ಞಾನೇ ಜೀವಸೇವಾ:** ವೇದಾಂತದಲ್ಲಿ ಎರಡು ಪರಿಕಲ್ಪನೆಗಳನ್ನು ನೋಡಬಹುದು: ೧. **ಪ್ರತ್ಯಗಾತ್ಮ** ೨. **ಪರಾಗಾತ್ಮ**. ಭಗವತ್‌ಚೈತನ್ಯವು ವ್ಯಕ್ತಿತ್ವದ ಅಂತರಾಳದಲ್ಲಿ ಭಾಸವಾಗುವುದಕ್ಕೆ ಪ್ರತ್ಯಗಾತ್ಮ ಎಂದು ಕರೆಯುತ್ತೇವೆ. ಅದೇ ತತ್ತ್ವವು ವಿಶ್ವದ ಎಲ್ಲ ಕಡೆ ಓತಪ್ರೋತವಾಗಿ ಹರಡಿರುವುದನ್ನು 'ಪರಾಗಾತ್ಮ' ಅಥವಾ 'ವಿರಾಡಾತ್ಮ' ಎನ್ನುತ್ತೇವೆ. ಆಧ್ಯಾತ್ಮಿಕ ಜೀವನದಲ್ಲಿ ಈ ಎರಡೂ ಪರಿಕಲ್ಪನೆಗಳ ಸಾಮರಸ್ಯ ಅತಿಮುಖ್ಯ. ಈ ಎರಡೂ ಆಯಾಮಗಳಲ್ಲಿ ಭಗಚ್ಚೈತನ್ಯವನ್ನು ಪರಿಭಾವಿಸುವುದೇ ಅತ್ಯಂತ ಶ್ರೇಷ್ಠ ಆದರ್ಶ.

ತನ್ನಂತರಂಗದಲ್ಲಿ ಭಗವಂತನ ಸಾನ್ನಿಧ್ಯವನ್ನು ಕಾಣಲು ಸಾಧಕನು ಪ್ರಯತ್ನಿಸುತ್ತಾನೆ. ಈ ಬಗೆಯ ಸಾಧನೆಯಲ್ಲಿ ಇರುವ ಎರಡು ಅಪಾಯಗಳೆಂದರೆ, **ವ್ಯಕ್ತಿಗತ ಸ್ವಾರ್ಥ** ಮತ್ತು **ಅಹಂಕಾರ**. ತನ್ನ ಏಳಿಗೆಯ ಬಗ್ಗೆಯೇ ಒಬ್ಬ ವ್ಯಕ್ತಿ ಚಿಂತಿಸುತ್ತಿದ್ದರೆ, ಅವನ ಆದರ್ಶ ಅದೆಷ್ಟೇ ಉನ್ನತವಾಗಿದ್ದರೂ, ಸ್ವಾರ್ಥ ಮತ್ತು ಸ್ವಪ್ರತಿಷ್ಠೆಯ ಕರಾಳರೂಪವನ್ನು ಪಡೆದುಕೊಳ್ಳುವ ಸಂದರ್ಭ ಇದ್ದೇ ಇರುತ್ತದೆ. ಹೀಗಾಗಿ ಪ್ರತ್ಯಗಾತ್ಮದ ಅನುಭವಕ್ಕೆ ನಾವು ಎಷ್ಟು ಮಹತ್ವ ನೀಡುತ್ತೇವೆಯೋ, ಅಷ್ಟೇ ಮಹತ್ವವನ್ನು ವಿರಾಡಾತ್ಮದ ಅನುಭವಕ್ಕೂ ನೀಡಬೇಕು. ವ್ಯಕ್ತಿಗತ ಧ್ಯಾನ, ಪ್ರಾರ್ಥನೆ, ಉಪಾಸನೆಗಳಿಂದ ನಮ್ಮ ಅಂತರಂಗದಲ್ಲಿ ದೇವರನ್ನು ಕಾಣಲು ಪ್ರಯತ್ನಪಡುತ್ತೇವೆ. ಅದೇ ರೀತಿ ಬಹಿರಂಗದಲ್ಲಿಯೂ ದೇವರ ಸಾನ್ನಿಧ್ಯವನ್ನು ಕಾಣಲು ಪ್ರಯತ್ನಪಡಬೇಕು. ಇದು ಹೇಗೆ ಸಾಧ್ಯ? ಇದಕ್ಕಾಗಿಯೇ ಶ್ರೀರಾಮಕೃಷ್ಣರು **'ಶಿವಜ್ಞಾನೇ ಜೀವಸೇವಾ'** – 'ಶಿವನೆಂಬ ಅರಿವಿನಿಂದ ಜೀವಿಗಳ ಸೇವೆ' ಎಂಬ ಸರಳಸೂತ್ರವನ್ನು ನೀಡಿದ್ದಾರೆ.

ಇನ್ನೊಬ್ಬ ಮನುಷ್ಯನನ್ನು ನಮ್ಮಂತೆಯೇ ಒಬ್ಬ ಅಲ್ಪ ಜೀವಿ ಎಂಬ ಭಾವನೆಯಿಂದ ನಾವು ನೋಡುತ್ತೇವೆ. ನಮ್ಮ ಬಗ್ಗೆ ನಮಗಿರುವ ಧೋರಣೆಯ ಮಾನದಂಡದಿಂದಲೇ ಇತರರನ್ನೂ ಅಳೆಯುತ್ತೇವೆ. ಈ ದೃಷ್ಟಿಯಲ್ಲಿ ಗುಣಾತ್ಮಕವಾದ ಪರಿವರ್ತನೆಯನ್ನು ಮಾಡಿಕೊಳ್ಳಬೇಕೆಂದು ಶ್ರೀರಾಮಕೃಷ್ಣರು ನಮಗೆ ಕರೆನೀಡುತ್ತಿದ್ದಾರೆ. ಅದಕ್ಕಾಗಿ ಮೊದಲು ನಮ್ಮ ಬಗೆಗಿನ ಪರಿಜ್ಞಾನವನ್ನು ಉದಾತ್ತಗೊಳಿಸಿಕೊಳ್ಳಬೇಕು. ಅದರ ವ್ಯಾಪ್ತಿಯನ್ನು ವಿಕಾಸಗೊಳಿಸಿಕೊಂಡು, ಇತರರನ್ನೂ ಅದೇ ಅರಿವಿನ ಬೆಳಕಿನಿಂದ ನೋಡಲು ಪ್ರಯತ್ನಿಸಬೇಕು. ಅಂತರಂಗದಲ್ಲಿ ದಿವ್ಯತೆಯ ಭಾವವನ್ನು ಮೂಡಿಸಿಕೊಂಡು, ಬಾಹ್ಯದಲ್ಲಿಯೂ ಅದನ್ನು ವಿಸ್ತರಿಸಿಕೊಳ್ಳಬೇಕು. ಇದು ಅಂತರಂಗದ ಸಹಾಯದಿಂದ ಬಾಹ್ಯ ಜಗತ್ತಿನ ಬಗೆಗಿನ ನಮ್ಮ ಭಾವನೆಯನ್ನು ಸಮೃದ್ಧಗೊಳಿಸುವ ವಿಧಾನ. ಇದಕ್ಕೆ ಪೂರಕವಾಗಿ, ನಮ್ಮ ಸುತ್ತಮುತ್ತಲಿನ ಜನರನ್ನು ಭಗವಂತನ ಅಭಿವ್ಯಕ್ತಿಗಳೆಂದು ಪರಿಗಣಿಸಿ, ಅವರನ್ನು ಪೂಜ್ಯಭಾವನೆಯಿಂದ ನೋಡುವುದೂ ಸಾಧನೆಯಾಗಬಲ್ಲುದು. ಅದು ಕ್ರಮೇಣ ನಮ್ಮ ಅಂತರಂಗದಲ್ಲಿ ಪರಮಾತ್ಮನ ಭಾವವನ್ನು ಉದ್ದೀಪನಗೊಳಿಸಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಇದು ಬಾಹ್ಯದ ಸಹಾಯದಿಂದ ಅಂತರಂಗವನ್ನು ಸಮೃದ್ಧಿಗೊಳಿಸುವ ಬಗೆ. ಈ ಎರಡೂ ವಿಧಾನಗಳಲ್ಲಿ, ದಿವ್ಯತೆಯನ್ನು **ಬಾಹ್ಯ** ಮತ್ತು **ಅಂತರಂಗ** – ಇವೆರಡರಲ್ಲೂ ಪರಿಭಾವಿಸುವುದೇ ಉದ್ದೇಶ.

ಹೀಗೆ ಜೀವಿಯನ್ನು ಶಿವನ ಭಾವನೆಯಿಂದ ಕಾಣುವ ದಾರ್ಶನಿಕ ದೃಷ್ಟಿಯನ್ನು ನಾವು ಬೆಳೆಸಿಕೊಳ್ಳಬಹುದು. ಆಗ ಜಗತ್ತಿನ ಎಲ್ಲ ಜೀವಿಗಳು ನಮಗೆ ಭಗವತ್ಸ್ವರೂಪಿಗಳಾಗಿಯೇ ಕಂಡುಬರುತ್ತಾರೆ. ಆ ಭಾವನೆಯಿಂದ ನಾವು ಅವರ ಸೇವೆ ಮಾಡುತ್ತೇವೆ; ಅದು ಭಗವಂತನಿಗೇ ಸಲ್ಲಿಸುತ್ತಿರುವ ಪೂಜೆಯೆಂದು ಭಾವಿಸುತ್ತೇವೆ. ಹೀಗೆ ಲೌಕಿಕವಾದ ಯಾವುದೇ ಬಗೆಯ ಸಹಾಯ ಅಥವಾ ಉಪಕಾರಕ್ಕೆ ಆಧ್ಯಾತ್ಮಿಕ ಆಯಾಮ ಉಂಟಾಗುತ್ತದೆ. ಭಗವದ್ಭಾವಸ್ಪರ್ಶದಿಂದ, ಆ ಎಲ್ಲ ಕೆಲಸಕಾರ್ಯಗಳೂ ಪವಿತ್ರವಾಗುತ್ತವೆ. ಈ ಭಾವವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಸೇವೆ ಮಾಡುವುದರಿಂದ ನಾವೂ ಪುನೀತರಾಗುತ್ತೇವೆ.


ಇದು ಕೇವಲ ಸಿದ್ಧಪುರುಷರಿಗೆ ಮಾತ್ರ ಸಾಧ್ಯ ಎಂದುಕೊಳ್ಳಬಾರದು. ಸಿದ್ಧಪುರುಷರಿಗೆ ಯಾವುದು ಸ್ವಾಭಾವಿಕವೋ, ಅದನ್ನು ಸಾಧನೆಯನ್ನಾಗಿ ಪರಿಗಣಿಸಿ, ಸತತ ಅಭ್ಯಾಸ ಮಾಡಬೇಕು ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುತ್ತಾನೆ. ಹೀಗಾಗಿ ಪವಿತ್ರ ಪೂಜಾಭಾವದಿಂದ ಕೂಡಿ ನಾವು ಮಾಡುವ ಯಾವುದೇ ಕಾರ್ಯವು ಕ್ರಮೇಣ ತನ್ನ ನೈಜ ಸ್ವಂತಿಕೆಯನ್ನು ಪಡೆದುಕೊಳ್ಳುತ್ತದೆ; ಆಧ್ಯಾತ್ಮಿಕ ಸಾಧನೆಯಾಗುತ್ತದೆ. ಯಾವುದು ಪ್ರಾರಂಭದಲ್ಲಿ 'ಕೆಲಸ'ವಾಗಿರುತ್ತದೆಯೋ ಅದು ಕ್ರಮೇಣ 'ಸೇವೆ'ಯಾಗುತ್ತದೆ; ಸೇವೆ 'ಪೂಜೆ'ಯಾಗುತ್ತದೆ; ಪೂಜೆ 'ಧ್ಯಾನ'ವಾಗುತ್ತದೆ; ಧ್ಯಾನದಿಂದ 'ಸಿದ್ಧಿ' ಒದಗುತ್ತದೆ. ಹೀಗೆ ಜೀವನದಲ್ಲಿ ಸಾರ್ಥಕತೆ ಉಂಟಾಗುತ್ತದೆ.

**ಉಪಸಂಹಾರ:** ಈ ಆಧುನಿಕಯುಗದಲ್ಲಿ ಮನುಷ್ಯನು ಬದುಕಿನ ಅರ್ಥಹೀನತೆ ಮತ್ತು ಅನಿಶ್ಚಿತತೆಗಳಿಂದ ನರಳುತ್ತಿದ್ದಾನೆ. ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಂಡಿರುವ ಅವನಿಗೆ ಕೇವಲ ಕಂದಾಚಾರಗಳು ಮತ್ತು ಕುರುಡುನಂಬಿಕೆಗಳು ಸಹ್ಯವಾಗುವುದಿಲ್ಲ. ಹೀಗಾಗಿ ಪರಿಶುದ್ಧ ಆಧ್ಯಾತ್ಮಿಕ ಸಿಂಚನವನ್ನು ಅವನು ಅಪೇಕ್ಷಿಸುತ್ತಿದ್ದಾನೆ. **ಪ್ರಾಮಾಣಿಕ ಜೀವನ, ದಿವ್ಯತೆಯ ಅನುಭವ, ಸಹಜೀವಿಗಳ ಜೊತೆಗೆ ಉತ್ತಮ ಸಂಬಂಧ** – ಇವುಗಳಿಗಾಗಿ ಹಾತೊರೆಯುತ್ತಿದ್ದಾನೆ. ಆಧುನಿಕ ಮಾನವನ ಈ ಆಧ್ಯಾತ್ಮಿಕ ಅಗತ್ಯಗಳನ್ನು ನವಯುಗಾಚಾರ್ಯರಾದ ಶ್ರೀರಾಮಕೃಷ್ಣರ ಬೋಧನೆಗಳು ಪೂರೈಸಬಲ್ಲವು. ಇಂದಿನ ಹತಾಶ ಸ್ಥಿತಿಯನ್ನು ನಿವಾರಿಸಿ, ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಜೀವನದಲ್ಲಿ ಹೊಸ ಚೈತನ್ಯವನ್ನು ಮೂಡಿಸಬಲ್ಲವು. ಆ ಮೂಲಕ ಜಗತ್ತಿನ ಕಲ್ಯಾಣಕ್ಕೆ ನಾಂದಿಯನ್ನು ಹಾಡಬಲ್ಲವು. ಹೀಗಾಗಿ ಕಾಲಸರಿದಂತೆಲ್ಲಾ ಶ್ರೀರಾಮಕೃಷ್ಣರ ಬೋಧನೆಗಳ ಪ್ರಸ್ತುತತೆ ಇನ್ನೂ ಅಧಿಕವಾಗುತ್ತ ಹೋಗುತ್ತಿದೆ. ಅವುಗಳನ್ನು ಅಳವಡಿಸಿಕೊಳ್ಳಬೇಕಾದ ಆವಶ್ಯಕತೆ ಹಿಂದೆಂದಿಗಿಂತಲೂ ಹೆಚ್ಚಾಗುತ್ತ ಹೋಗುತ್ತಿದೆ. ಶ್ರೀರಾಮಕೃಷ್ಣರ ವಿಶ್ವಮಾನವ ಪ್ರೇಮವು ಅವರ ಬೋಧನೆಗಳ ಮೂಲಕ ನಮ್ಮೆಡೆಗೆ ಹರಿದುಬರುತ್ತಿದೆ. ಅವುಗಳನ್ನು ಶ್ರದ್ಧೆಯಿಂದ, ಭಕ್ತಿಭಾವದಿಂದ ಸ್ವೀಕರಿಸೋಣವೇ? ▸

# 'ನನ್ನ ಗುರುದೇವರ ಸಂದೇಶ'

**ಸ್ವಾಮಿ ವಿವೇಕಾನಂದ**

ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಸಂದೇಶವಾಹಕರಲ್ಲಿ ಅಗ್ರಗಣ್ಯರು. ತಮ್ಮ ಗುರುದೇವರ ಜೀವನ-ಸಂದೇಶಗಳ ವಿಶ್ವವ್ಯಾಪಕತೆಯನ್ನು ಗ್ರಹಿಸಿ ಅದನ್ನು ಜಗತ್ತಿನೆಲ್ಲೆಡೆ ಪ್ರಸಾರ ಮಾಡಿದ ಮಹನೀಯರು. ಶ್ರೀರಾಮಕೃಷ್ಣರ ಸಂದೇಶದ ವೈಶಿಷ್ಟ್ಯದ ಬಗ್ಗೆ ಅವರು ಹೇಳಿರುವ ಕೆಲವು ಮನೋಜ್ಞ ಅಂಶಗಳ ಸಂಗ್ರಹವಿದು.



ಕಠಿಣವಾದ ಅಕಳಂಕ ಪವಿತ್ರತೆ ಶ್ರೀರಾಮಕೃಷ್ಣರ ಜೀವನದಲ್ಲಿ ಉದಿಸಿತ್ತು. ನಮ್ಮ ಜೀವನದ ಮುಂದಿರುವ ಹೋರಾಟವನ್ನೆಲ್ಲಾ ಅವರು ಮೀರಿ ಹೋಗಿದ್ದರು. ತಮ್ಮ ಆಯುಷ್ಯದ ಮುಕ್ಕಾಲು ಪಾಲನ್ನು ಸವೆಯಿಸಿ ಪಡೆದ ಆಧ್ಯಾತ್ಮಿಕ ಅನರ್ಘ್ಯ ರತ್ನಗಳನ್ನು ಮಾನವಕೋಟಿಗೆ ದಾನಮಾಡುವುದಕ್ಕಾಗಿ ಅವರು ಸಿದ್ಧರಾಗಿದ್ದರು. ಅವರ ಬೋಧನೆ ಮತ್ತು ಉಪದೇಶ ವಿಚಿತ್ರ ರೀತಿಯದು. ನಮ್ಮ ದೇಶದಲ್ಲಿ ಗುರುವನ್ನು ಅತಿ ಪೂಜ್ಯದೃಷ್ಟಿಯಿಂದ ನೋಡುತ್ತೇವೆ. ಅವರನ್ನು ದೇವರಂತೆ ಭಾವಿಸುತ್ತೇವೆ. ನಮ್ಮ ತಾಯಿತಂದೆ ಗಳಿಗೂ ಅಷ್ಟು ಗೌರವವನ್ನು ತೋರುವುದಿಲ್ಲ. ತಾಯಿತಂದೆಗಳು ನಮಗೆ ದೇಹವನ್ನು ನೀಡುವರು. ಗುರು ಮುಕ್ತಿಮಾರ್ಗವನ್ನು ತೋರುವನು. ನಾವು ಗುರುವಿನ ಮಕ್ಕಳು; ಗುರುವಿನ ಆಧ್ಯಾತ್ಮಿಕ ಸಂತತಿಯಲ್ಲಿ ನಾವು ಜನಿಸುವುದು. ಗುರುವಿಗೆ ಗೌರವ ತೋರಲು ಎಲ್ಲ ಹಿಂದುಗಳೂ ಮುಂದೆ ಬರುವರು, ಅವನನ್ನು ಆದರಿಸುವರು. ಆದರೆ ಈ ಗುರುವಿಗೆ, ಜನರು ತಮ್ಮನ್ನು ಗೌರವಿಸಬೇಕೆ ಬೇಡವೆ ಎಂಬ ಭಾವನೆಯು ಇರಲಿಲ್ಲ. ತಾನೊಬ್ಬ ದೊಡ್ಡ ಗುರುವೆಂಬ ಭಾವನೆಯೂ ಅವರಲ್ಲಿ ಇರಲಿಲ್ಲ. ಎಲ್ಲವನ್ನೂ ಮಾಡುತ್ತಿರುವುದು ಜಗನ್ಮಾತೆಯಲ್ಲದೆ ತಾನಲ್ಲವೆಂದು ಅವರು ಭಾವಿಸಿದ್ದರು. "ನನ್ನ ಬಾಯಿಂದ ಏನಾದರೂ ಒಳ್ಳೆಯದು ಬಂದರೆ ಅದನ್ನು ಹೊರಡಿಸುತ್ತಿರುವವಳು ತಾಯಿ. ಅದರೊಂದಿಗೆ ನನಗೇನು ಸಂಬಂಧವಿದೆ?" ಎಂದು ಅವರು ಅನವರತವೂ ಹೇಳುತ್ತಿದ್ದರು. ಅವರು ಮಾಡಿದ ಪ್ರತಿಯೊಂದು ಕೆಲಸದ ಹಿಂದೆ ಇದ್ದ ಭಾವ ಇದು. ಸಾಯುವವರೆಗೆ ಅವರು ಇದನ್ನು ತೊರೆಯಲಿಲ್ಲ. ಅವರು ಯಾರನ್ನೂ ಅರಸಿಕೊಂಡು ಹೋಗಲಿಲ್ಲ. "ಮೊದಲು ಶೀಲವನ್ನು ರೂಢಿಸಿ, ಆಧ್ಯಾತ್ಮಿಕ ಶಕ್ತಿಯನ್ನು ಗಳಿಸಿ; ಫಲ ತಾನಾಗಿ ಬರುವುದು" – ಇದೇ ಅವರ ಸಿದ್ಧಾಂತ. ಅವರಿಗೆ ಅತ್ಯಂತ ಪ್ರಿಯವಾಗಿದ್ದ ಉಪಮೆ ಇದು: "ಕಮಲ ಅರಳಿದರೆ ಮಧುವನ್ನು ಹುಡುಕಿಕೊಂಡು ದುಂಬಿಗಳು ತಾವಾಗಿ ಬರುವುವು. ಅದರಂತೆಯೇ ನಿಮ್ಮ ಶೀಲದ ಕಮಲ ಸಂಪೂರ್ಣ ಅರಳಲಿ; ಆಗ ಫಲ ತಾನಾಗಿ ಬರುವುದು." ನಾವು ಕಲಿಯಬೇಕಾದ ದೊಡ್ಡ ನೀತಿ ಇದು. ನೂರಾರು ವೇಳೆ ನನ್ನ ಗುರು ಇದನ್ನು ಬೋಧಿಸಿದರು. ಆದರೂ ಅನೇಕ ವೇಳೆ ನಾನು ಇದನ್ನು ಮರೆಯುವೆನು. ಆಲೋಚನಾ ಶಕ್ತಿಯನ್ನು ಎಲ್ಲೋ ಕೆಲವರು ತಿಳಿದುಕೊಳ್ಳಬಲ್ಲರು. ಒಬ್ಬ ಗುಹೆಗೆ ಹೋಗಿ ಯಾರಿಗೂ ಕಾಣದೆ ಒಂದು ಮಹದಾಲೋಚನೆಯನ್ನು ಮಾಡಿ ಸತ್ತರೆ, ಆ ಆಲೋಚನೆ ಗುಹೆಯ ಗೋಡೆಯನ್ನು ತೂರಿ, ಆಕಾಶದಲ್ಲಿ ಸ್ಪಂದಿಸಿ, ಎಲ್ಲಾ ಜನಾಂಗಗಳ ಅಂತರಾಳದಲ್ಲಿಯೂ ಪ್ರವಹಿಸುವುದು. ಇದು ಆಲೋಚನಾ ಶಕ್ತಿ. ಮತ್ತೊಬ್ಬರಿಗೆ ನಿಮ್ಮ ಭಾವನೆಯನ್ನು ಕೊಡಲು ಅವಸರಪಡಬೇಡಿ. ಮೊದಲು ಕೊಡುವುದಕ್ಕೆ ನಿಮ್ಮಲ್ಲಿ ಏನಾದರೂ ಇರಲಿ. ಯಾರಿಗೆ ಕೊಡುವುದಕ್ಕೆ ಏನಾದರೂ ಇದೆಯೊ ಅವನೇ ಬೋಧಿಸಬಲ್ಲ. ಬೋಧನೆ ಎಂದರೆ ಬರಿಯ ಮಾತಲ್ಲ. ಸಿದ್ಧಾಂತವನ್ನು ಸಾರುವುದಲ್ಲ; ಅದೊಂದು ಸಂವಹನ. ನಾನು ನಿಮಗೆ ಒಂದು ಹೂವನ್ನು ಕೊಡುವಂತೆ ಆಧ್ಯಾತ್ಮಿಕತೆಯನ್ನು ಕೊಡಬಹುದು. ಇದು ಅಕ್ಷರಶಃ ಸತ್ಯ. ಭಾರತದಲ್ಲಿ ಈ ಭಾವನೆ ಹಳೆಯದು. ಪಾಶ್ಚಾತ್ಯ ಧರ್ಮಪ್ರವರ್ತಕರ ಪರಂಪರೆಯಲ್ಲಿ ಇಟ್ಟಿರುವ ನಂಬಿಕೆ ಇದಕ್ಕೆ ತಕ್ಕ ಉದಾಹರಣೆ. ಮೊದಲು ಚಾರಿತ್ರ್ಯವನ್ನು ರೂಢಿಸಿ. ನೀವು ಮಾಡಬಹುದಾದ ಅತಿ ಪವಿತ್ರ ಕರ್ತವ್ಯ ಅದು. ಮೊದಲು ಸತ್ಯವನ್ನು ನೀವು ಗ್ರಹಿಸಿ. ಅನಂತರ ಅದನ್ನು ನಿಮ್ಮಿಂದ ಪಡೆಯುವುದಕ್ಕೆ ಹಲವಾರು ಜನರಿರುವರು. ಅವರೆಲ್ಲ ಬರುವರು. ಇದು ನನ್ನ ಗುರುವಿನ ದೃಷ್ಟಿ. ಯಾರನ್ನೂ ಅವರು ದೂರಲಿಲ್ಲ. ಹಲವಾರು ವರುಷಗಳು ಅವರ ಸಮೀಪದಲ್ಲಿದ್ದೆ. ಯಾವ ಪಂಥವನ್ನೂ ಒಮ್ಮೆಯಾದರೂ ಅವರು ದೂರಿ ದುದನ್ನು ನಾನು ಕೇಳಲಿಲ್ಲ. ಎಲ್ಲಾ ಪಂಥಗಳ ಮೇಲೂ ಅವರಿಗೆ ಒಂದೇ ಸಮನಾದ ಸಹಾನುಭೂತಿಯಿತ್ತು. ಎಲ್ಲದರಲ್ಲಿಯೂ ಒಂದು ಸಾಮರಸ್ಯವನ್ನು ಅವರು ಕಂಡಿದ್ದರು. ಒಬ್ಬ ಜ್ಞಾನಿಯಾಗಿರಬಹುದು, ಭಕ್ತನಾಗಿರಬಹುದು, ಯೋಗಿಯಾಗಿರಬಹುದು, ಅದ್ವಿತೀಯ

ಕರ್ಮಿಯಾಗಿರಬಹುದು. ಎಲ್ಲಾ ಧರ್ಮಗಳೂ ಇವುಗಳಲ್ಲಿ ಒಂದಲ್ಲಾ ಒಂದು ಭಾವವನ್ನು ಪ್ರತಿನಿಧಿಸುತ್ತವೆ. 'ಇವೆಲ್ಲವನ್ನೂ ಒಬ್ಬನೇ ರೂಢಿಸುವುದು ಸಾಧ್ಯ. ಭವಿಷ್ಯದ ಜನಾಂಗ ಮಾಡುವುದು ಇದನ್ನೇ.' ಇದೇ ಅವರ ಭಾವನೆ. ಅವರು ಯಾರನ್ನೂ ದೂರಲಿಲ್ಲ, ಎಲ್ಲರಲ್ಲಿಯೂ ಒಳ್ಳೆಯದನ್ನೇ ನೋಡಿದರು.

ಈ ಅದ್ಭುತ ವ್ಯಕ್ತಿಯ ಸಂದೇಶವನ್ನು ಕೇಳುವುದಕ್ಕೆ, ಅವರ ದರ್ಶನ ಪಡೆಯುವುದಕ್ಕೆ ಸಹಸ್ರಾರು ಮಂದಿ ಬಂದರು. ಅವರು ಮಾತನಾಡುತ್ತಿದ್ದುದು ಒಂದು ಗ್ರಾಮ್ಯಭಾಷೆ. ಆಡಿದ ಪ್ರತಿನುಡಿಯಲ್ಲಿಯೂ ಕಿಡಿಯಿತ್ತು. ಅದು ನೇರವಾಗಿ ಕೇಳುವವರ ಎದೆಯನ್ನು ಸೇರುತ್ತಿತ್ತು. ನಾವು ಮಾತನಾಡುವ ವಿಷಯವಲ್ಲ ಮುಖ್ಯ, ರೀತಿಯಲ್ಲ ಮುಖ್ಯ. ಹೇಳುವ ಮನುಷ್ಯನ ವ್ಯಕ್ತಿತ್ವ ಪ್ರತಿಯೊಂದು ಮಾತಿಗೂ ಶಕ್ತಿಯನ್ನು ನೀಡುವುದು. ಕೆಲವು ವೇಳೆ ಇದು ನಮಗೆಲ್ಲಾ ಭಾಸವಾಗುವುದು. ಅತಿ ಸುಂದರ ಭಾಷಣವನ್ನು ಕೇಳುವೆವು. ಯುಕ್ತಿ ಪೂರಿತ ಸಂಭಾಷಣೆಯನ್ನು ಕೇಳುವೆವು. ಮನೆಗೆ ಹೋಗಿ ಇದನ್ನೆಲ್ಲಾ ಮರೆಯುವೆವು. ಮತ್ತೆ ಕೆಲವು ವೇಳೆ ಅತಿ ಸರಳವಾದ ಕೆಲವು ಮಾತುಗಳನ್ನು ಕೇಳುವೆವು. ಅವು ನಮ್ಮ ಜೀವನಕ್ಕೆ ತಾಕಿ, ನಮ್ಮಲ್ಲಿ ಐಕ್ಯವಾಗಿ, ಶಾಶ್ವತವಾದ ಪರಿಣಾಮವನ್ನು ಉಂಟುಮಾಡುವುವು. ಯಾರು ತಮ್ಮ ಮಾತಿನಲ್ಲಿ ವ್ಯಕ್ತಿತ್ವವನ್ನು ತುಂಬಬಲ್ಲರೊ ಆ ನುಡಿಯೆ ಪರಿಣಾಮಕಾರಿಯಾಗುವುದು. ಆದರೆ ಅಲ್ಲಿ ಅದ್ವಿತೀಯ ಮಹಿಮಾತಿಶಯವಿರಬೇಕು. ಬೋಧನೆಯೆಲ್ಲ ದಾನದ ಮತ್ತು ಸ್ವೀಕಾರದ ಮೇಲೆ ನಿಂತಿದೆ. ಗುರು ವಿದ್ಯೆಯನ್ನು ದಾನ ಮಾಡುವನು. ಶಿಷ್ಯ ಅದನ್ನು ಸ್ವೀಕರಿಸುವನು. ಆದರೆ ಒಬ್ಬನಿಗೆ ಕೊಡುವುದಕ್ಕೆ ಏನಾದರೂ ಇರಬೇಕು; ಮತ್ತೊಬ್ಬ ಸ್ವೀಕರಿಸುವುದಕ್ಕೆ ಯೋಗ್ಯನಾಗಿರಬೇಕು. ನನ್ನ ಗುರುದೇವರು "ಎಲ್ಲಾ ಪದಾರ್ಥಗಳಿಗಿಂತ ಹೆಚ್ಚಾಗಿ, ಆಧ್ಯಾತ್ಮಿಕವನ್ನು ಕೊಡಬಹುದು. ಸ್ವೀಕರಿಸಬಹುದು" ಎನ್ನುತ್ತಿದ್ದರು. ಆದಕಾರಣ ಅಧ್ಯಾತ್ಮ ಶಕ್ತಿಯನ್ನು ಮೊದಲು ಪಡೆಯಿರಿ; ಕೊಡುವುದಕ್ಕೆ ಏನಾದರೂ ಇರಲಿ; ಅನಂತರ ಪ್ರಪಂಚ ದೆದುರಿಗೆ ನಿಂತು ಅದನ್ನು ಕೊಡಿ. ಧರ್ಮ ಬಾಯಿಮಾತಲ್ಲ; ನಂಬಿಕೆಯಲ್ಲ; ಸಿದ್ಧಾಂತವಲ್ಲ ಅಥವಾ ಅದೊಂದು ಕೋಮುವಾರು ಭಾವನೆಯೂ ಅಲ್ಲ. ಧರ್ಮವು ಕೋಮುಗಳಲ್ಲೂ, ಸಂಘಗಳಲ್ಲೂ ಜೀವಿಸಲಾರದು. ಆತ್ಮನಿಗೂ ದೇವರಿಗೂ ಇರುವ ಸಂಬಂಧ ಅದು. ಇದನ್ನು ಒಂದು ಸಂಘಟನೆಯಾಗಿ ಹೇಗೆ ತಾನೇ ಮಾಡಲು ಸಾಧ್ಯ? ಅನಂತರ ಇದೊಂದು ವ್ಯಾಪಾರವಾಗುವುದು. ಎಲ್ಲಿ ವ್ಯಾಪಾರ ದೃಷ್ಟಿಯಿದೆಯೋ, ವ್ಯಾಪಾರ ನಿಯಮಗಳಿವೆಯೋ, ಅಲ್ಲಿ ಆಧ್ಯಾತ್ಮಿಕತೆ ಕೊನೆಗಾಣುವುದು. ಧರ್ಮ ದೇವಸ್ಥಾನ ಕಟ್ಟುವುದ ರಲ್ಲಿ ಇಲ್ಲ ಅಥವಾ ಸಾಮೂಹಿಕ ಪೂಜೆಗೆ ಹೋಗುವುದರಲ್ಲಿಯೂ ಇಲ್ಲ. ಅದು ಗ್ರಂಥದಲ್ಲಿಲ್ಲ, ಮಾತಿನಲ್ಲಿಯೂ ಇಲ್ಲ, ಉಪನ್ಯಾಸ ದಲ್ಲಿಯೂ ಇಲ್ಲ ಅಥವಾ ಸಂಸ್ಥೆಯಲ್ಲಿಯೂ ಇಲ್ಲ. ಧರ್ಮವಿರುವುದು ಸಾಕ್ಷಾತ್ಕಾರದಲ್ಲಿ. ನಾವೇ ಸತ್ಯವನ್ನು ಪ್ರತ್ಯಕ್ಷ ಅನುಭವಿಸುವವರೆಗೂ ಯಾವುದೂ ತೃಪ್ತಿಯನ್ನು ಕೊಡಲಾರದು ಎಂಬುದು ನಮಗೆಲ್ಲಾ ಗೊತ್ತಿದೆ. ನಾವು ಎಷ್ಟು ವಾದಿಸಿದರೂ, ಕೇಳಿದರೂ ಒಂದು ಮಾತ್ರ ನಮಗೆ ತೃಪ್ತಿಯನ್ನು ಕೊಡಬಲ್ಲದು. ಅದೇ ನಮ್ಮ ಸಾಕ್ಷಾತ್ಕಾರ. ಪ್ರಯತ್ನಪಟ್ಟರೆ ಅದು ನಮ್ಮೆಲ್ಲರಿಗೂ ಸಾಧ್ಯ. ಇದನ್ನು ನಾವು ಸಾಧಿಸಬೇಕಾದರೆ ಮೊದಲು  ತ್ಯಾಗಮಾಡಬೇಕು. ಸಾಧ್ಯವಾದಮಟ್ಟಿಗೂ ನಾವು ತ್ಯಜಿಸಬೇಕು. ಕತ್ತಲೆ ಮತ್ತು ಬೆಳಕು, ಪ್ರಾಪಂಚಿಕ ಭೋಗ ಮತ್ತು ದೇವರ ಸುಖ– ಇವು ಒಟ್ಟಿಗೆ ಇರಲಾರವು. ರಾಮ ಮತ್ತು ಕಾಮ – ಇವೆರಡನ್ನೂ ನಾವು ತೃಪ್ತಿಪಡಿಸ ಲಾರೆವು. ಸಾಧ್ಯವಾದರೆ ಜನರು ಪ್ರಯತ್ನಪಡಲಿ; ಇದನ್ನು ಸಾಧಿಸುವುದಕ್ಕೆ ಪ್ರಯತ್ನಪಟ್ಟ ಲಕ್ಷಾಂತರ ಜನರನ್ನು ನಾನು ಎಲ್ಲಾ ದೇಶ ಗಳಲ್ಲಿಯೂ ನೋಡಿರುವೆನು. ಆದರೆ ಇದು ವ್ಯರ್ಥವಾಗುವುದು. ಮೇಲಿನ ಸಂದೇಶದಲ್ಲಿ ಒಂದು ಸತ್ಯಾಂಶವಿದ್ದರೆ ಅದೇ ದೇವರಿಗಾಗಿ ಸರ್ವಸ್ವವನ್ನೂ ತ್ಯಜಿಸುವುದು. ಇದು ಬಹಳ ಕಷ್ಟ. ನಿಧಾನವಾದ ಕೆಲಸ. ಆದರೆ ಅದನ್ನು ನೀವು ಇಲ್ಲೇ ಈಗಲೇ ಪ್ರಾರಂಭಿಸಬಹುದು. ಕ್ರಮೇಣ ನಾವು ಗುರಿಯೆಡೆಗೆ ಸಾಗುವೆವು.

ಸತ್ಯ ಏಕವಾಗಿದ್ದರೂ ಅನಂತರೂಪಗಳನ್ನು ತಾಳಬಲ್ಲದು, ಬೇರೆ ಬೇರೆ ನಿಲುವುಗಳಿಂದ ಒಂದೇ ಸತ್ಯದ ಬೇರೆ ಬೇರೆ ದೃಶ್ಯಗಳನ್ನು ಪಡೆಯಬಹುದು ಎಂಬ ಮುಖ್ಯ ರಹಸ್ಯವನ್ನು ನಾವು ತಿಳಿಯಬೇಕಾಗಿದೆ. ಆಗ ಮತ್ತೊಬ್ಬರನ್ನು ದ್ವೇಷಿಸುವ ಬದಲು ಎಲ್ಲರಿಗೂ ಅನಂತ ಸಹಾನುಭೂತಿಯನ್ನು ತೋರಬಹುದು. ಎಲ್ಲಿಯವರೆಗೂ ಅನಂತ ಸ್ವಭಾವಗಳು ಇರುವುವೋ ಅಲ್ಲಿಯವರೆಗೂ ಒಂದೇ ಸತ್ಯ ಹಲವು ರೀತಿಗಳನ್ನು ತಾಳಬೇಕಾಗುವುದು. ಇದನ್ನು ತಿಳಿದಾದ ಮೇಲೆ, ಪರಸ್ಪರ ಸಹಾನುಭೂತಿ ಅತ್ಯವಶ್ಯಕವೆಂದು ಗೊತ್ತಾಗುವುದು. ಹೇಗೆ ಪ್ರಕೃತಿಯ ವೈವಿಧ್ಯದಲ್ಲಿ ಐಕ್ಯತೆ ಇದೆಯೋ, ಕಣ್ಣೆದುರಿಗೆ ಬಹಳ ವೈವಿಧ್ಯ ಇದ್ದರೂ ಅದರೊಳಗೆ ಅನಂತವಾದ ಅವಿಕಾರಿಯಾದ ಏಕತ್ವವಿದೆಯೋ, ಅದರಂತೆಯೇ ಪ್ರತಿಯೊಬ್ಬ ಮಾನವನಲ್ಲಿಯೂ ಕೂಡ ಪಿಂಡಾಂಡವು ಬ್ರಹ್ಮಾಂಡದ ಬರಿಯ ಒಂದು ಸಂಕ್ಷಿಪ್ತ ಪುನರಾವೃತ್ತಿ. ಈ ವೈವಿಧ್ಯಗಳಿದ್ದರೂ ಇವುಗಳ ಅಂತರಾಳದಲ್ಲಿ ಸನಾತನ ಸ್ವರಮೇಳವಿರುವುದು. ನಾವು ಇದನ್ನು ಒಪ್ಪಬೇಕಾಗಿದೆ. ಉಳಿದ ಭಾವನೆಗಳಿಗಿಂತ ಈ ಒಂದು ಭಾವನೆ ನಮಗೆ ಇಂದು ಅತ್ಯವಶ್ಯಕವಾಗಿ ಬೇಕಾಗಿರುವುದು. ನನ್ನ ದೇಶದಲ್ಲಿ ಹಲವು ಮತಪಂಥಗಳು ತುಂಬಿ ತುಳುಕಾಡುತ್ತಿವೆ. ಅದೃಷ್ಟವಶಾತ್ ಅಥವಾ ದುರದೃಷ್ಟವಶಾತ್ ಧರ್ಮಭಾವನೆ ಇರುವ ಪ್ರತಿಯೊಬ್ಬನೂ ತನ್ನ ಧರ್ಮವನ್ನು ಪ್ರಚಾರಮಾಡಲು ಪ್ರಚಾರಕರ ಒಂದು ಗುಂಪನ್ನು ಅಲ್ಲಿಗೆ ಕಳುಹಿಸಬೇಕೆಂದು ಭಾವಿಸುವನು. ಬಾಲ್ಯದಿಂದಲೂ ಪ್ರಪಂಚದ ಹಲವು ಪಂಗಡಗಳ ಪರಿಚಯ ನನಗಿದೆ. ಮರ್‌ಮನ್ನರೂ ತಮ್ಮ ಸಂದೇಶವನ್ನು ಹರಡುವುದಕ್ಕೆ ಭರತಖಂಡಕ್ಕೆ ಬಂದರು. ಎಲ್ಲರೂ ಬರಲಿ! ಧರ್ಮವನ್ನು ಬೋಧಿಸುವುದಕ್ಕೆ ಅದೇ ಸ್ಥಳ. ಉಳಿದೆಲ್ಲ ದೇಶಗಳಿಗಿಂತಲೂ ಅದು ಅಲ್ಲಿ ಚೆನ್ನಾಗಿ ಬೇರನ್ನು ಬಿಡು ವುದು. ನೀವು ಹಿಂದೂಗಳಿಗೆ ರಾಜಕೀಯವನ್ನು ಬೋಧಿಸಿದರೆ ಅವರಿಗೆ ಅರ್ಥವಾಗುವುದಿಲ್ಲ. ಆದರೆ ನೀವು ಧರ್ಮವನ್ನು ಬೋಧಿಸು ವುದಕ್ಕೆ ಬಂದರೆ, ಅದು ಎಷ್ಟು ವಿಚಿತ್ರವಾಗಿದ್ದರೂ, ಬಹು ಬೇಗ ನೂರಾರು ಮಂದಿ ಅನುಯಾಯಿಗಳು ದೊರಕುವರು. ನಿಮ್ಮ